**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.233/2024**

| | | |
|---|---|---|
| ಸಾಕ್ಷಿದಾರರ ಹೆಸರು | : ನಿಜಲಿಂಗಪ್ಪ ಅಬಲೂರು | ***P.W-8*** |
| ತಂದೆಯ ಹೆಸರು | : ಶಿವಶೆಟ್ಟೆಪ್ಪ | ***C.W-11*** |
| ವಯಸ್ಸು | : 52 ವರ್ಷ | |
| ಉದ್ಯೋಗ | : ವ್ಯಾಪಾರ | |
| ವಾಸ | : ರಾಜೇಶ್ವರಿ ನಗರ, ರಾಣೇಬೆನ್ನೂರು. | |

**ದಿನಾಂಕಃ 22-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಚಾಸಾ-1 ಮತ್ತು 4 ರವರು ನನ್ನ ಸಂಬಂಧಿಕರು ಆಗಬೇಕು. 2 ನೇ ಆರೋಪಿ ಚಾಸಾ-1 ರವರನ್ನು ಮದುವೆಯಾದ ನಂತರ ಆರೋಪಿತರು ನನಗೆ ಪರಿಚಯವಾಗಿರುತ್ತಾರೆ. ಆರೋಪಿತರು ಮದುವೆ ಮಾತುಕತೆಗೆ ಚಾಸಾ-1 ರವರ ಮನೆಗೆ ಬಂದಾಗ ಆಗ ಚಾಸಾ-1 ರವರನ್ನು 2 ನೇ ಆರೋಪಿಗೆ ಸರಳವಾಗಿ ಮದುವೆ ಮಾಡಿಕೊಡಿ ಎಂದು ಹೇಳಿರುತ್ತಾರೆ. ನಂತರ ಎಂಗೆಜಮೆಂಟ್ ಆದ ನಂತರ ಆರೋಪಿತರು 5 ಲಕ್ಷ ರೂಪಾಯಿ ಹಾಗೂ 3 ಕೆ.ಜಿ. ಬೆಳ್ಳಿ ಮತ್ತು 25 ತೊಲ ಬಂಗಾರ ವರದಕ್ಷಿಣೆಯಾಗಿ ಕೊಡಬೇಕು ಎಂದು ಕೇಳಿರುತ್ತಾರೆ. ಚಾಸಾ-4 ರವರು ಅದಕ್ಕೆ ಒಪ್ಪಿರಲಿಲ್ಲ. ನಂತರ ನಾವೆಲ್ಲರೂ ಗುರು-ಹಿರಿಯರು ಸೇರಿ ಚಾಸಾ-4 ರವರನ್ನು ಕರೆಯಿಸಿ ಮಾತುಕತೆ ಮಾಡಿ ಹಣ ಕೊಡುವುದು ಬೇಡ ಸರಳವಾಗಿ ವಿವಾಹ ಮಾಡಿಕೊಡಿ ಎಂದು ಹೇಳಿರುತ್ತೇವೆ. ನಂತರ 2013 ರಲ್ಲಿ ಚಾಸಾ-4 ರವರು ಚಾಸಾ-1 ರವರ ವಿವಾಹವನ್ನು 2 ನೇ ಆರೋಪಿಯ ಜೊತೆ ಕೊಟ್ಟೂರಿನ ಕೊಟ್ಟೂರೇಶ್ವರ ಕಲ್ಯಾಣ ಮಂಟಪದಲ್ಲಿ ಮಾಡಿ ಕೊಟ್ಟಿರುತ್ತಾರೆ. ವಿವಾಹ ಸಮಯದಲ್ಲಿ 25 ತೊಲ ಬಂಗಾರ, 2 ಕೆಜಿ 574 ಗ್ರಾಂ ಬೆಳ್ಳಿಯ ಸಾಮಾನುಗಳನ್ನು ವರದಕ್ಷಿಣೆಯಾಗಿ ಕೊಟ್ಟಿರುತ್ತಾರೆ. ಮದುವೆಯ ಖರ್ಚನ್ನೆಲ್ಲಾ ಚಾಸಾ-4 ರವರೆ ಭರಿಸಿರುತ್ತಾರೆ.

ಮದುವೆಯ ನಂತರ ಚಾಸಾ-1 ರವರು ಆರೋಪಿತರ ಜೊತೆ



ರಾಣೇಬೆನ್ನೂರಿನಲ್ಲಿ ವಾಸವಾಗಿರುತ್ತಾರೆ. ಮೂರು-ನಾಲ್ಕು ತಿಂಗಳು ಆರೋಪಿತರು

ಚಾಸಾ-1 ರವರನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಂತರ ಹೆಚ್ಚಿನ ವರದಕ್ಷಿಣೆ ತಂದರೆ ಮಾತ್ರ ಮನೆಯಲ್ಲಿ ಇಟ್ಟುಕೊಳ್ಳುತ್ತೇವೆ. ಇಲ್ಲದಿದ್ದರೆ ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ ಎಂದು ಕಿರಿಕಿರಿ ಪ್ರಾರಂಭಿಸಿರುತ್ತಾರೆ. ಚಾಸಾ-1 ರವರು ಈ ವಿಚಾರವನ್ನು ನನಗೆ ಫೋನ್ ಮಾಡಿ ಹೇಳುತ್ತಿದ್ದರು. ನಾನು ಮತ್ತು ಚಾಸಾ-10 ರವರು ಆರೋಪಿತರ ಮನೆಗೆ ಹೋಗಿ ಹೊಂದಿಕೊಂಡು ಹೋಗಿ ಬುದ್ಧಿವಾದ ಹೇಳಿರುತ್ತೇವೆ. ಆದರೆ ಅವರು ತಿದ್ದಿಕೊಂಡಿರುವುದಿಲ್ಲ. ನಂತರ ಚಾಸಾ-1 ರವರು ಗರ್ಭಿಣಿಯಾಗಿದ್ದು ಆರೋಪಿತರು ನೀನು ಆಬಾಷನ್ ಮಾಡಿಸಿಕೊ ಎಂದು ಹೇಳುತ್ತಿದ್ದರು. ನಂತರ ಹೆರಿಗೆಯ ಸಲುವಾಗಿ ಚಾಸಾ-1 ರವರು ಅವರ ತವರು ಮನೆಗೆ ಹೋಗಿರುತ್ತಾರೆ. ಚಾಸಾ-1 ರವರಿಗೆ ತವರು ಮನೆಯಲ್ಲಿ ಗಂಡು ಮಗು ಹುಟ್ಟಿರುತ್ತದೆ. ಆರೋಪಿತರು ಮಗುವನ್ನು ನೋಡಲು ಅಥವಾ ಅವರನ್ನು ಕರೆದು ಕೊಂಡು ಹೋಗಲೂ ಸಹ ಬಂದಿರುವುದಿಲ್ಲ. 9/10 ತಿಂಗಳಾದರೂ ಆರೋಪಿತರು ಚಾಸಾ-1 ರವರನ್ನು ಕರೆದು ಕೊಂಡು ಹೋಗಲು ಬಂದಿರದ ಕಾರಣ ಚಾಸಾ-4 ರಿಂದ 6 ರವರೇ ಚಾಸಾ-1 ರವರನ್ನು ಕರೆದು ಕೊಂಡು ಆರೋಪಿತರ ಮನೆಗೆ ಬಿಡಲು ಬಂದಾಗ ಆರೋಪಿತರು ಚಾಸಾ-1 ರವರನ್ನು ಮನೆಯ ಒಳಗೆ ಕರೆದು ಕೊಳ್ಳಲು ತಯಾರು ಇರಲಿಲ್ಲ. ವರದಕ್ಷಿಣೆ ಹಣ ತಂದರೆ ಮಾತ್ರ ಮನೆಯ ಒಳಗೆ ಸೇರಿಸಿ ಕೊಳ್ಳುತ್ತೇವೆ ಇಲ್ಲದಿದ್ದರೆ ಮನೆಯ ಒಳಗೆ ಸೇರಿಸಿಕೊಳ್ಳುವುದಿಲ್ಲ ಎಂದು ಆರೋಪಿತರು ಹೇಳಿರುತ್ತಾರೆ. ಈ ವಿಚಾರವನ್ನು ಚಾಸಾ-1 ಮತ್ತು 4 ರವರು ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ. ನಂತರ ನಾನು ಮತ್ತು ನನ್ನ ಹೆಂಡತಿ ಅಲ್ಲಿಗೆ ಹೋಗಿ ಅಜಾಬಾಜಿನ ಮನೆಯವರನ್ನೆಲ್ಲಾ ಸೇರಿಸಿ ಪಂಚಾಯಿತಿ ಮಾಡಿರುತ್ತೇವೆ. ನಂತರ ಚಾಸಾ-1 ರವರನ್ನು ಹಾಗೂ ಮಗುವನ್ನು ಮನೆಯ ಒಳಗೆ ಬಿಟ್ಟಿರುತ್ತೇವೆ. ನಂತರ 2 ನೇ ಆರೋಪಿ ಚಾಸಾ-1 ರವರು ಮನೆಯಲ್ಲಿ ಇದ್ದರೆ ನಾನು ಮನೆಯಲ್ಲಿ ಇರುವುದಿಲ್ಲ ಎಂದು ಹೇಳಿ ಮನೆ ಬಿಟ್ಟು ಹೋಗಿರುತ್ತಾನೆ. ಚಾಸಾ-1 ರವರು ಊಟಕ್ಕೆ ಹೋದಾಗ ನಿನ್ನ ಗಂಡನೇ ಮನೆಯಲ್ಲಿ ಇಲ್ಲ ಹೇಗೆ ಊಟ ಮಾಡುತ್ತಿಯಿ ಎಂದು 1 ನೇ ಆರೋಪಿ ಕಿರುಕುಳ ಕೊಡುತ್ತಿದ್ದರು. ಚಾಸಾ-1 ರವರ ಮನಸಿಗೆ ಬೇಜಾರಾಗಿ ಅದೇ ದಿನ ಮಗು ಕರೆದು ಕೊಂಡು ನಮ್ಮ ಮನೆಗೆ ಬಂದಿರುತ್ತಾರೆ. ನಾವು ವಿಚಾರಿಸಿದಾಗ ಆಕೆ ಈ ಎಲ್ಲಾ ಘಟನೆಯ ಬಗ್ಗೆ ಹೇಳಿರುತ್ತಾಳೆ. ನಾನು ಇಲ್ಲಿಗೆ



ಬಂದ ವಿಚಾರವನ್ನು ನನ್ನ ಅತ್ತೆಗೆ ಹೇಳಬೇಡಿ ಎಂದು ನನ್ನಿಂದ ಚಾಸಾ-1 ರವರು ಬಾಷೆ ಪಡೆದಿದ್ದರು. ಮರುದಿನ ಚಾಸಾ-1 ರವರು ಆರೋಪಿತರ ಮನೆಗೆ ಹೋಗಿರುತ್ತಾರೆ. ನಂತರ ಚಾಸಾ-4 ಮತ್ತು 5 ರವರು ನನಗೆ ಫೋನ್ ಮಾಡಿ

ಹೇಗಾದರೂ ಮಾಡಿ ಚಾಸಾ-1 ಮತ್ತು 2 ನೇ ಆರೋಪಿಯನ್ನು ಒಂದು ಮಾಡಿ ಎಂದು ಹೇಳಿದ್ದರಿಂದ ನಾನು ಮತ್ತು ನನ್ನ ಹೆಂಡತಿ ಆರೋಪಿತರ ಮನೆಗೆ ಹೋಗಿ ಆಜುಬಾಜಿನವರನ್ನು ಸೇರಿಸಿ ಪಂಚಾಯಿತಿ ಮಾಡಿರುತ್ತೇವೆ. 2 ನೇ ಆರೋಪಿ ನಾನು ಇನ್ನು ಮುಂದೆ ಈ ರೀತಿ ಮಾಡುವುದಿಲ್ಲ ಎಂದು ಒಪ್ಪಿಕೊಂಡಿರುತ್ತಾನೆ. ನಾವು ವಾಪಸ್ಸು ಮನೆಗೆ ಬಂದ ನಂತರ ಪುನಃ ಅದೇ ದಿನ ಸಂಜೆ 2 ನೇ ಆರೋಪಿ ಮನೆ ಬಿಟ್ಟು ಹೋಗಿರುತ್ತಾನೆ. ನಂತರ ನಾವು 2 ನೇ ಆರೋಪಿಗೆ ಎಷ್ಟು ಹೇಳಿದರೂ ಸಹ ಆತ ಒಪ್ಪಿರಲಿಲ್ಲ 1 ಮತ್ತು 3 ನೇ ಆರೋಪಿತರು ಮನೆಯ ಸಾಮಾನುಗಳನ್ನೆಲ್ಲಾ ಬೇರೆ ಕಡೆಗೆ ತೆಗೆದು ಕೊಂಡು ಹೋಗಿರುತ್ತಾರೆ. ಚಾಸಾ-4 ಮತ್ತು 5 ರವರೇ ರಾಣೇಬೆನ್ನೂರಿಗೆ ಬಂದು ಮನೆಗೆ ಬೇಕಾದ ಸಾಮಾನುಗಳನ್ನೆಲ್ಲಾ ಕೊಡಿಸಿ ಚಾಸಾ-1 ರವರ ಜೊತೆ 2/3 ತಿಂಗಳು ವಾಸವಾಗಿರುತ್ತಾರೆ. ನಂತರವೂ ಸಹ 2 ನೇ ಆರೋಪಿ ಮನೆಗೆ ಬಾರದ ಕಾರಣ ಚಾಸಾ-1 ರವರು ಈ ಬಗ್ಗೆ ದೂರನ್ನು ಕೊಟ್ಟಿರುತ್ತಾರೆ. ನಾನು ಪೋಲಿಸರಿಗೆ ಈ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನ್ಯಾಯಾಲಯದ ಮುಂದೆ ಹಾಜರು ಇರುವ 1 ನೇ ಆರೋಪಿಯ ಹೆಸರು ಗಿರಿಜಮ್ಮ ಆಗಿರುತ್ತದೆ. ಆರೋಪಿತರು ಚಾಸಾ-1 ರವರನ್ನು ನೋಡಲು ಬಂದಾಗ ಪರಿಚಯ ಆಗಿರುತ್ತಾರೆ. ಈ ಮದುವೆಯನ್ನು ನಾನು ನೋಡಿ ನಿಶ್ಚಯ ಮಾಡಿರುವುದಿಲ್ಲ. 3 ನೇ ಆರೋಪಿ ಸುಮಾರು 10 ವರ್ಷಗಳಿಂದ ಬೆಂಗಳೂರಿನಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಮೊದಲು ರಾಣೇಬೆನ್ನೂರಿನಲ್ಲಿಯೇ ಇದ್ದರೂ ಈಗ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಚಾಸಾ-1 ಮತ್ತು 2 ನೇ ಆರೋಪಿಯ ವಿವಾಹದ ಸಮಯದಲ್ಲಿ 3 ನೇ ಆರೋಪಿತನು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 3 ನೇ ಆರೋಪಿಯ ಮದುವೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ.



ಚಾಸಾ-1 ರವರು ನನ್ನ ಹೆಂಡತಿಯ ಅಕ್ಕನ ಮಗಳಾಗಿರುತ್ತಾಳೆ. ಅವಳು ನಮಗೆ ದೂರದ ಸಂಬಂಧಿ ಆಗಿರುತ್ತರೆ. ಚಾಸಾ-1 ರವರು ಈಗ ಕೊಟ್ಟೂರಿನಲ್ಲಿ ಸುಮಾರು 8 ವರ್ಷಗಳಿಂದ ಟೀಚರ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಚಾಸಾ-1 ರವರು 2 ನೇ ಆರೋಪಿಯ ವಿರುದ್ದ 2016 ರಲ್ಲಿ ಜೀವನಾಂಶ ಕೇಳಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅರ್ಜಿ ಸಲ್ಲಿಸಿ ವಿಚಾರವನ್ನು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ಚಾಸಾ-1 ರವರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದೂರು ಸಲ್ಲಿಸಿದ ವಿಚಾರ ನನಗೆ ಗೊತ್ತಿರುತ್ತದೆ.

ಚಾಸಾ-4 ರವರಿಗೆ ಚಾಸಾ-1 ರವರು ಒಬ್ಬಳೆ ಮಗಳು ಎಂದರೆ ಸರಿ. ಚಾಸಾ-4 ರವರಿಗೆ ಚಾಸಾ-1 ರವರು ಕೊಟ್ಟೂರಿನಲ್ಲಿಯೇ ಜೀವನ ಮಾಡಬೇಕು ಎಂದು ಬಹಳ ಆಸೆ ಇತ್ತು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ 2 ನೇ ಆರೋಪಿಗೆ ಕೊಟ್ಟೂರಿನ ಹತ್ತಿರಕ್ಕೆ ವರ್ಗಾವಣೆ ಮಾಡಿಸಿಕೊ ಎಂದು ಒತ್ತಡ ಹಾಕುತ್ತಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಹಾಲನಗೌಡ ಚಾಸಾ-1 ರವರ ಅಜ್ಜ ಆಗಿರುತ್ತಾರೆ. ಇವತ್ತು ಹೇಳಿದ ವಿಚಾರವನ್ನು ಪೋಲಿಸ್ ಠಾಣೆಯಲ್ಲಿ ಹೇಳಿರುತ್ತೇನೆ. ಚಾಸಾ-1 ರವರು ದೂರಿನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. 3 ನೇ ಆರೋಪಿಗೆ ಈಗ 2 ಜನ ಮಕ್ಕಳು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. 3 ನೇ ಆರೋಪಿಯ ವಿವಾಹವಾದ ನಂತರ 1 ನೇ ಆರೋಪಿ ಅವರ ಜೊತೆ ಬೆಂಗಳೂರಿನಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿ.

ಈ ದಿನದವರೆಗೂ ಚಾಸಾ-1 ರವರು ನನಗೆ ಗಂಡ ಬೇಕು ಎಂದು ಯಾವುದೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಆರೋಪಿತರು 5 ಲಕ್ಷ ನಗದು ಹಣ, 25 ತೊಲ ಬಂಗಾರ ಹಾಗೂ 3 ಕೆ.ಜಿ. ಬೆಳ್ಳಿ ಕೇಳಿದ್ದರು ಎಂದು ನಾನು ನನ್ನ ಹೇಳಿಕೆ ನೋಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರು ಅದಕ್ಕೆ ಒಪ್ಪಿರಲಿಲ್ಲ ನಾನು ಸೇರಿ ಪಂಚಾಯಿತಿ ಮಾಡಿ ಒಪ್ಪಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2016 ರಲ್ಲಿ ಚಾಸಾ-1 ರವರು



ನನಗೆ ಪೋನ್ ಮಾಡಿ ಈ ವಿಚಾರ ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ನನ್ನ ಹೆಂಡತಿ ಆರೋಪಿತರ ಮನೆಗೆ ಪಂಚಾಯಿತಿ ಮಾಡಲು ಹೋಗಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-1 ರವರಿಗೆ ಹೆರಿಗೆಯಾದಾಗ ಆಸ್ಪತ್ರೆಯ ಖರ್ಚನ್ನೆಲ್ಲಾ 2 ನೇ ಆರೋಪಿಯೇ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಚಾಸಾ-1 ರವರಿಗೆ ಎಲ್ಲಾ ಆರೋಪಿತರು ಅಬಾಷನ್ ಮಾಡಿಸಿಕೊ ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಹೆರಿಗೆಯಾದ ನಂತರ ಇಲ್ಲೆ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿದರೂ

ಸಹ ಚಾಸಾ-1 ರವರು ಅವರ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರನ್ನು ಸ್ವತಃ ಕರೆದು ಕೊಂಡು ಆರೋಪಿತರು ಮನೆಯ ಒಳಗೆ ಸೇರಿಸಿಕೊಂಡಿಲ್ಲ ವರದಕ್ಷಿಣೆ ತರಬೇಕು ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರನ್ನು 2016 ರಲ್ಲಿ ಕರೆದು ಕೊಂಡು ಹೋಗಿರುತ್ತಾರೆ ಆದರೆ ದಿನಾಂಕ ನೆನಪಿರುವುದಿಲ್ಲ. ದಿಃ 12-06-2015 ರಂದು 2 ನೇ ಆರೋಪಿ ಕೆಲಸಕ್ಕೆ ಹಾಜರು ಆಗಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಂತರ ಚಾಸಾ-1 ರವರು ನನಗೆ ಫೋನ್ ಮಾಡಿ ವಿಚಾರ ತಿಳಿಸಿದ್ದು ನಾನು ಮತ್ತು ನನ್ನ ಹೆಂಡತಿ ಹೋಗಿ ಪುನಃ ಪಂಚಾಯಿತಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 2 ನೇ ಆರೋಪಿ ಕೆಲಸಕ್ಕೆ ಹೋಗಿದ್ದು 1 ಮತ್ತು 3 ನೇ ಆರೋಪಿತರು ಬೆಂಗಳೂರಿನಲ್ಲಿ ಇದ್ದುದರಿಂದ ಅವರು ಅಲ್ಲಿಗೆ ಬರುವ ಪ್ರಮೇಯವೇ ಬರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಊಟ ಮಾಡಲು ಹೋದಾಗ 1 ನೇ ಆರೋಪಿ ತಕರಾರು ಮಾಡಿದ್ದರು ಎಂದು ಚಾಸಾ-1 ರವರು ನನಗೆ ಫೋನ್ ಮೂಲಕ ತಿಳಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಹೇಳಿದ್ದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಅದೇ ದಿನ ಚಾಸಾ-1 ರವರು ನಮ್ಮ ಮನೆಗೆ ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ಯಾವ

ದಿನ ಬಂದಿರುತ್ತಾರೆ ಎಂದು ದಿನಾಂಕ ನನಗೆ ಈಗ ನೆನಪಿರುವುದಿಲ್ಲ. ಆರೋಪಿತರು ನಂತರ ಬೇರೆ ಮನೆಗೆ ಸಾಮಾನುಗಳನ್ನು ತೆಗೆದು ಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ-1, ಚಾಸಾ-4 ರಿಂದ 6 ರವರು ಮನೆಗೆ ಬೇಕಾದ ಸಾಮಾನುಗಳನ್ನು ತೆಗೆದು ಕೊಂಡು ಬಂದು ಚಾಸಾ-1 ರವರ ಜೊತೆ ಆ ಮನೆಯಲ್ಲಿ 2/3 ತಿಂಗಳು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2/3 ತಿಂಗಳು ಆರೋಪಿತರು ಎಲ್ಲಿ ಇದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ. ನಾವು ಊರಿನಲ್ಲಿ ವಿಚಾರಿಸಿದ್ದು ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. 2 ನೇ ಆರೋಪಿ ಆ ಅವಧಿಯಲ್ಲಿ ಕೆಲಸಕ್ಕೆ ಹಾಜರು ಆಗುತ್ತಿದ್ದರೋ ಇಲ್ಲವೊ ಎಂದು ನಾನು ವಿಚಾರಿಸಿರುವುದಿಲ್ಲ. ಚಾಸಾ-1 ರವರು ನನ್ನ ಸಂಬಂಧಿಕರಾಗಿದ್ದರಿಂದ ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ-1 ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಯಾವ ದಿನಾಂಕದಂದು ಫಿರ್ಯಾದಿ ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಾನು ಚಾಸಾ-1 ರವರ ಜೊತೆ ದೂರು ಕೊಡಲು ಹೋಗಿರುವುದಿಲ್ಲ. ನಂತರ ಪೋಲಿಸ್ ಠಾಣೆಗೆ ಹೋಗಿ ನಾನು ಹೇಳಿಕೆ ಕೊಟ್ಟಿರುತ್ತೇನೆ. ನನಗೆ ಈ ಕೇಸಿನ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಮನೆತನ ರಾಣೇಬೆನ್ನೂರಿನಲ್ಲಿ ಹೆಸರಾಂತ ಮನೆತನ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಆರೋಪಿಯ ಗಂಡ ಸಹ ಸರ್ಕಾರಿ ಹುದ್ದೆಯಲ್ಲಿದ್ದರು ಎಂದರೆ ಸರಿ. ಆದ ಕಾರಣ ಆರೋಪಿತರಿಗೆ ವರದಕ್ಷಿಣೆ ಕೇಳುವ ಪ್ರಮೇಯವೇ ಬಂದಿರುವುದಿಲ್ಲ ಮತ್ತು ಚಾಸಾ-4 ರವರು ಯಾವುದೇ ವರದಕ್ಷಿಣೆ ಸಹ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿತರು ಮೇಲೆ ಮನೆ ಕಟ್ಟುವುದಕ್ಕಾಗಿ ವರದಕ್ಷಿಣೆ ಬೇಕು ಎಂದು ಕೇಳುತ್ತಿದ್ದರು ಎಂದು ಹೇಳುತ್ತಾರೆ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.233/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : ಜ್ಯೋತಿ ಕದರಮಂಡಲಗಿ | | ***P.W-7*** |
| ಗಂಡನ ಹೆಸರು | : ಕಾಂತೇಶ | | ***C.W-9*** |
| ವಯಸ್ಸು | : 46 ವರ್ಷ | | |
| ಉದ್ಯೋಗ | : ಸುಪ್ರವೈಸರ್ , ಸಿಡಿಪಿಓ ಆಫೀಸ್, ರಾಣೇಬೆನ್ನೂರು | | |
| ವಾಸ | : ಮೃತ್ಯುಂಜಯ ನಗರ, ರಾಣೇಬೆನ್ನೂರು. | | |

**ದಿನಾಂಕಃ 22-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನನಗೆ ಆರೋಪಿತರ ಪರಿಚಯ ಇರುತ್ತದೆ. ಅವರು ನಮ್ಮ ಮನೆಯ ಎದುರು ವಾಸವಾಗಿದ್ದರು. ಚಾಸಾ-1 ರವರ ಪರಿಚಯ ಇರುತ್ತದೆ. ನಾನು ಆ ದಿನ ಕೆಲಸಕ್ಕೆ ಹೋಗಿದ್ದು ಆರೋಪಿತರ ಮನೆಯಲ್ಲಿ ಏನು ಘಟನೆ ನಡೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತರು ಮತ್ತು ಚಾಸಾ-1 ರವರ ಪರಿಚಯ ಹೊರತು ಪಡಿಸಿ ಈ ಕೇಸಿನ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ಅವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು , ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಚಾಸಾ-1 ಮತ್ತು 2 ನೇ ಆರೋಪಿಯ ವಿವಾಹ ದಿಃ 12-07-2013 ರಂದು ಆಗಿರುತ್ತದೆ ಎಂದರೆ ಸರಿ. ಆನಂತರ ಚಾಸಾ-1 ರವರು ಆರೋಪಿತರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಬರುತ್ತಿದ್ದರು ಹೋಗುತ್ತಿದ್ದರು ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಆರೋಪಿತರು ಚಾಸಾ-1 ರವರಿಗೆ ಹೆಚ್ಚಿನ ವರದಕ್ಷಿಣೆ ತರಬೇಕು ಎಂದು ಹೇಳಿ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಾನು

ಹೋಗಿ ಅವರಿಗೆ ಬುದ್ಧಿವಾದ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಗರ್ಭಿಣಿಯಾದಾಗ ಆರೋಪಿತರು ಆಬಾಷನ್ ಮಾಡಿಸಬೇಕು ಎಂದು ಹೇಳುತ್ತಿದ್ದರು ಎಂದು ಚಾಸಾ-1 ರವರು ನನ್ನ ಬಳಿ ಹೇಳುತ್ತಿದ್ದರು ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಹೆರಿಗೆಗೆ ತವರು ಮನೆಗೆ ಹೋಗಿ 9 ತಿಂಗಳು ಆಗಿದ್ದರೂ ಸಹ ಆರೋಪಿತರು ಅವರನ್ನು ಕರೆದು ಕೊಂಡು ಹೋಗಲು ಬಂದಿರಲಿಲ್ಲ ನಂತರ ಚಾಸಾ-1 ಹಾಗೂ ಅವರ ಮಗು ಮತ್ತು ತಂದೆ-ತಾಯಿಯವರು ಸ್ವತಃ ಆರೋಪಿತರ ಮನೆಗೆ ಹೋದಾಗ ಆರೋಪಿತರು ಗಲಾಟೆ ಮಾಡಿ ಅವರನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು , ಚಾಸಾ-2 ಮತ್ತು 3 ರವರು ಪಂಚಾಯಿತಿ ಮಾಡಿ ಬುದ್ಧಿ ಹೇಳಿ ಚಾಸಾ-1 ರವರನ್ನು ಮನೆಯ ಒಳಗೆ ಕಡೆದು ಕೊಳ್ಳಿ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ಆ ನಂತರವೂ ಸಹ ಆರೋಪಿತರು ಕಿರುಕುಳ ಕೊಡುವುದನ್ನು ಮುಂದುವರೆಸಿದ್ದರಿಂದ ಚಾಸಾ-1 ರವರು ಈ ಬಗ್ಗೆ ಪೋಲಿಸರಿಗೆ ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 31-08-2015 ರಂದು ಈಗ ನನಗೆ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯನ್ನು ನಿರಾಕರಿಸಿದ್ದರಿಂದ ನಿಪಿ-27 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಆಜುಬಾಜು ಮನೆಯವರು ಆಗಿರುವುದರಿಂದ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಏನೂ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.